# ಪ್ರವಾಸ ನೀಡುವ ಚೈತನ್ಯ

ಕ್ರಿಯಾಶೀಲ ವ್ಯಕ್ತಿಗಳು ಸದಾ ಏನನ್ನಾದರೂ ಹೊಸತನ್ನು ಮಾಡುವ, ಹೊಸತನ್ನು ಆಲೋಚಿಸುವವರಾಗಿದ್ದು ಅವರು ಸಾಮಾನ್ಯರಿಗಿಂತ ಬದುಕಿಗೆ ಎದುರಾಗುವ ಕ್ರಮವೇ ಭಿನ್ನವಾದದ್ದು. ದೈನಂದಿನ ಒತ್ತಡಗಳಲ್ಲಿ, ಜಂಜಾಟಗಳಲ್ಲಿ ದಿನವೂ ಕಾರ್ಯಕ್ರಮ ಹಾಗೂ ಕರ್ತವ್ಯಗಳಲ್ಲಿ ಮುಳುಗಿದ್ದರೂ ಅವರ ಮನಸ್ಸು ಮಾತ್ರ ಇದೆಲ್ಲದರಿಂದ ಆಚೆದಾಟಿ ಹೊಸತೇನನ್ನೋ ಹುಡುಕುತ್ತಿರುತ್ತಿದೆ. ಇದು ಕವಿ, ಕಲಾವಿದ, ವಿಜ್ಞಾನಿ, ಚಿಂತಕ, ವಿಮರ್ಶಕ ಇವರೆಲ್ಲರಲ್ಲೂ ನಡೆಯುವ ಅಂತರ್ಮುಖಿ ವ್ಯಾಪಾರ. ಇದ್ದೂ ಇಲ್ಲವಾಗುವ, ಇಲ್ಲವಾಗಿಯೂ ಇರುವ ದ್ವಂದ್ವದ ಬದುಕು ಇದು. ದ್ವಂದ್ವವೆಂದ ಮಾತ್ರಕ್ಕೆ ಇದು ಲೋಪವಲ್ಲ. ಸೃಜನಾತ್ಮಕವಾಗಿ ಶೋಧನಕ್ಕೆ ತೊಡಗಿಸಿಕೊಳ್ಳುವ ಹೊಸ ಅಭಿವ್ಯಕ್ತಿ ಕ್ರಮ.

ಇಂದು ನಗರ ಹಾಗೂ ನಗರ ಜೀವನದ ಯಾಂತ್ರಿಕತೆಯಲ್ಲಿ, ಅವಸರದ ನಡಿಗೆಯಲ್ಲಿ ಜೀವಿಸುವವರೆಲ್ಲರೂ ಒತ್ತಡದಿಂದ ಬಿಡುಗಡೆಯ ದಾರಿಗಳನ್ನು ಹುಡುಕುತ್ತಿರುತ್ತಾರೆ. ಕೆಲಸದ ದಿನಗಳನ್ನು ದಾಟಿ ಬರುವ ರಜಾ ದಿನಗಳಾದ ಶನಿವಾರ, ಭಾನುವಾರಗಳನ್ನು ಆಸೆಯಿಂದ ಕಾಯುತ್ತಿರುತ್ತಾರೆ. ಸಂಸಾರಸ್ಥರಾದರೆ ಕುಟುಂಬವನ್ನು ಹೊರಗೆ ಕರೆದುಕೊಂಡು ಶಾಂತಿ ನೆಮ್ಮದಿಯ ಸ್ಥಳಗಳನ್ನು ಹುಡುಕಿ ಆನಂದ ಪಡುತ್ತಾರೆ. ಸೃಜನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡವರು ಹೊಸ ಸಂವೇದನೆಗಳು, ಬದಲಾಗಬೇಕಾದ ಹಳೆ ಜಗತ್ತಿನಲ್ಲಿ ಹೊಸದನ್ನು ಅರಸ ಬಯಸುತ್ತಾರೆ. ಹೊಸ ಕನಸು, ಆತ್ಮವಿಶ್ವಾಸ, ಹೊಸ ಕೃತಿಯೊಂದರ ರಚನೆಗೆ ಸಾಕಷ್ಟು ಅವಕಾಶ ಈ ಅಲೆದಾಟಗಳಲ್ಲಿ ಅವರಿಗೆ ಖಂಡಿತಾ ಸಿಗುತ್ತದೆ.

ಜಗತ್ತು ಹಳೆಯದಾಗುತ್ತಿದೆಯೇ ಅಥವಾ ನಾವೇ ಹಳಬರಾಗುತ್ತಿದ್ದೇವೆಯೇ – ಇದು ದಿನ ನಿತ್ಯ ನಮ್ಮ ಮನಸಲ್ಲಿ ಸುಳಿದು ಹೋಗುವ ಪ್ರಶ್ನೆ. ಐವತ್ತರ ವಯೋಮಾನಕ್ಕೆ ಹತ್ತಿರವಾಗುತ್ತಿದ್ದಂತೆಯೇ ಇಂತಹ ಅಸ್ತಿತ್ವದ ಅಲೋಚನೆಗಳೆಲ್ಲಾ ಒಂದಲ್ಲ ಒಂದು ಹಂತದಲ್ಲಿ ಎದುರಾಗುತ್ತಲೇ ಇರುತ್ತವೆ. ಹೊಸ ಆಲೋಚನೆಗಳುಳ್ಳ ಯುವ ಜನಾಂಗದ ಜೊತೆಗಿನ ಸಂಪರ್ಕ, ಹೊಸ ಸ್ಥಳ, ಹೊಸ ಬಗೆಯ ಚಿಂತನೆಗಳು ಮತ್ತೆ ಮತ್ತೆ ಜಡವಾಗುತ್ತಿರುವ ಮನಸ್ಸಿಗೆ ಹೊಸ ಹರೆಯವನ್ನು ತುಂಬುತ್ತವೆ. ಹೊಸ ಸ್ಥಳ, ಪ್ರವಾಸಿ ಸ್ಥಳಗಳು, ಮೈತುಂಬಿಕೊಂಡ ಪ್ರಕೃತಿ, ತುಂಬಿ ಹರಿಯುವ ಹಳ್ಳ, ಕೊಳ್ಳ, ನದಿ, ಹಿಮದಿಂದ ಮುಚ್ಚಿ ಹೋದ ಪರ್ವತಗಳು, ಆಯಾ ಕಾಲಕ್ಕೆ ತಕ್ಕಂತೆ ಚಿಗುರುವ, ಎಲೆಗಳುದುರಿ ಬೋಳಾಗುವ ಮರ, ದೇವತೆಗಳ ಗುಡಿ ಗುಂಡಾರಗಳು, ಭಾರತೀಯರ ನಂಬಿಕೆಯ ನೆಲೆಯಾಗಿರುವ ನದಿ ಪರ್ವತಗಳು, ದೇವ ದೇವತೆಗಳು– ಇವೆಲ್ಲವೂ ನಾವು ದಿನನಿತ್ಯ ಜೀವಿಸುವ, ನಡೆದಾಡುವ ಭೂಮಿಯಲ್ಲಿನ ಅದ್ಭುತ ಜೀವ ಜಗತ್ತಿನ ಪ್ರತೀಕಗಳು. ಈ ಪ್ರವಾಸದಿಂದ ಎದುರಾಗುವ ಹೊಸ ಹೊಸ ಅನುಭವಗಳು ನಮ್ಮನ್ನು ಮತ್ತೆ ಮತ್ತೆ ಉಲ್ಲಾಸದಿಂದ ಜೀವಿಸುವಂತೆ ಮಾಡುತ್ತವೆ. ನಮ್ಮದೇ ಅನುಭಾವದ ಲೋಕವನ್ನು ಕಟ್ಟಿ ಕೊಳ್ಳುವಂತೆ ಮಾಡುತ್ತವೆ.

ನಾಲ್ಕನೆಯ ಬಾರಿ ಈ ಪ್ರದೇಶಗಳಲ್ಲಿ ಪ್ರವಾಸ ಮಾಡುವಾಗ ನಾವು ಚಾರ್ ಧಾಮ ಯಾತ್ರ ಅಂದರೆ ಉತ್ತರಾಂಚಲ್ ಪ್ರದೇಶದ ನಾಲ್ಕು ಮುಖ್ಯವಾದ ಆಧ್ಯಾತ್ಮಿಕ ಪ್ರದೇಶಗಳಿಗೆ ಬೇಟಿಕೊಟ್ಟಿದ್ದೆವು. ಪ್ರದೇಶಗಳ ವೈಶಿಷ್ಟ್ಯವೆಂದರೆ ಈ ಯಾತ್ರೆ ಪ್ರಯಾಣಿಕರಿಗೆ ಸಾಧ್ಯವಾಗುವುದು ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳ ಕೊನೆಯತನಕ ಮಾತ್ರ. ಉಳಿದ ಆರು ತಿಂಗಳ ಅವಧಿಯಲ್ಲಿ ಈ ಎಲ್ಲಾ ಪ್ರದೇಶಗಳು ಹಿಮದಿಂದ ಆವೃತವಾಗಿ ಸಂಪೂರ್ಣ ಮುಚ್ಚಿ ಹೋಗುತ್ತವೆ. ಈ ಪ್ರದೇಶಗಳಲ್ಲಿ ಪ್ರವಾಸ ಮಾಡುವವರಿಗೆ ಆಸ್ತಿಕವಾದ ಮನಸ್ಸು ಅಂದರೆ ದೈವ, ದೇವತೆಗಳ ಬಗ್ಗೆ ಭಕ್ತಿಯಿರಬೇಕು ಎಂಬ ಸಿದ್ಧ ನಿಲುವಿನ ಅಗತ್ಯವೇನಿಲ್ಲ. ಭಾರತೀಯ ಮನಸ್ಥಿತಿಯನ್ನು ರೂಪಿಸಿರುವ ದೈವ, ಆಚಾರ, ಸಂಸ್ಕೃತಿ, ನಂಬಿಕೆಗಳ ಒಂದು ದರ್ಶನವೂ ಈ ಪ್ರವಾಸದಿಂದಲೇ ಸಾಧ್ಯ.

2014ರಲ್ಲಿ ಮೇಘ ಸ್ಫೋಟದ ಮಳೆ ಈ ಹಲವು ಪ್ರದೇಶಗಳ ಮೂಲ ಸ್ವರೂಪಗಳನ್ನು ನಿರ್ದಯವಾಗಿ ಅಳಿಸಿಬಿಟ್ಟಿದೆ. ಮೂಲ ಮಾದರಿಯಲ್ಲಿಯೇ ಈ ಆಲಯಗಳು ತಲೆಯೆತ್ತಿದ್ದರೂ ಇನ್ನೂ ಕೆಲವು ಪ್ರದೇಶಗಳು ಮತ್ತೆ ತಲೆಯೆತ್ತಲಾರದಂತೆ ನೆಲಕ್ಕೆ ಕುಸಿದಿವೆ. ಕಾಡುವ ಚಳಿ, ಬೀಳುವ ಹಿಮ ಮತ್ತು ಮಳೆ. ಇಲ್ಲಿಗೆ ಬದುಕನ್ನು ಅಸ್ತವ್ಯಸ್ತಗೊಳಿಸಿವೆ. ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇಲ್ಲಿ ದುರ್ಲಭ್ಯ. ಓದಿದ ವಯಸ್ಕ ಹುಡುಗರೂ ಅನಿವಾರ್ಯವಾಗಿ ಡೋಲಿ ಹೊರುತ್ತಲೂ, ಕುದುರೆಯಲ್ಲಿ ಪ್ರಯಾಣಿಕರನ್ನು ಸಾಗಿಸುತ್ತಲೂ ತಮ್ಮ ಮೌನದ ಕಥೆಗಳನ್ನು ಪ್ರಯಾಣಿಕರೊಂದಿಗೆ ಬಿಚ್ಚಿಕೊಳ್ಳುತ್ತಾರೆ. ಈ ಭಕ್ತರಾದರೂ ಅವರ ಆಯಾಸ, ಬೆವರುಗಳ ನಡುವೆ ರಾರಾಜಿಸುವ ಚಟ್ಟದ ಮೇಲೆ ಹೆಣಗಳಾಗಿ ಕಾಣುವುದು ಇಲ್ಲಿನ ಬಹುದೊಡ್ಡ ವ್ಯಂಗ್ಯ. ಪ್ರವಾಸವೇ ಇಲ್ಲಿನ ಮುಖ್ಯ ಉದ್ಯಮವಾಗಿದ್ದು, ಆಲೂ ಪರಾಟ, ಮ್ಯಾಗಿ, ಟೀ ಕಾಯಿಸುತ್ತಾ ಅದನ್ನೇ ಹೊಟ್ಟೆಪಾಡಾಗಿಸಿಕೊಂಡು ಇಲ್ಲಿನ ಜನ ಭಕ್ತರೊಂದಿಗೆ ಬೆಟ್ಟವೇರುತ್ತಾ, ಭಕ್ತರೊಂದಿಗೆ ಬೆಟ್ಟದಿಂದಿಳಿಯುತ್ತಾ ದಿನನಿತ್ಯೀದೇವ ಭೂಮಿಯಲ್ಲಿ ಕೇಂದ್ರವೇ ಇಲ್ಲದೆ ನಡೆದಾಡುತ್ತಿದ್ದಾರೆ. ಈ ಹೊಟ್ಟೆಪಾಡಿನ ಕಥನ ನಡೆಯುವುದಾದರೂ ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಮಾತ್ರ. ಉಳಿದಂತೆ ಆರು ತಿಂಗಳು ಈ ಪ್ರದೇಶಗಳು ಹಿಮದ ಕಾರಣ, ಮಳೆಯ ಕಾರಣ ಮುಚ್ಚಲ್ಪಟ್ಟು ಪ್ರವಾಸೋದ್ಯಮ ಬಂದ್ ಆಗುತ್ತದೆ. ಇಲ್ಲಿನ ಜನ ಬೇರೊಂದು ಜಾಗಕ್ಕೆ ಅನಿವಾರ್ಯವಾಗಿ ವಲಸೆ ಹೋಗಲೇ ಬೇಕಾಗುತ್ತದೆ.

ಪ್ರವಾಸವು ನಮ್ಮ ಮೈ ಮತ್ತು ಮನಗಳನ್ನು ಅರಳಿಸುತ್ತಿದೆ. ಹೊಸ ಶಕ್ತಿ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ನಮ್ಮನ್ನು ಹೊಸ ಮನುಷ್ಯರನ್ನಾಗಿ ರೂಪಿಸುತ್ತದೆ. ಈ ಎಲ್ಲಾ ಮಾತುಗಳು ನಿಜವೇ. ಆದರೆ ದೇವ ಭೂಮಿಯಲ್ಲಿ ದೇವನದಿ ಗಂಗೆ ಹರಿವ ಜಾಗದಲ್ಲಿ ಮಾನವ ತನ್ನ ಬದುಕಿಗೆ ನಡೆಸುವ ಹೋರಾಟವು ಮನಸ್ಸನ್ನು ಖಿನ್ನತೆಗೆ ದೂಡುತ್ತದೆ. ಖಿನ್ನತೆಗೆ ಒಳಗಾಗುತ್ತಲೇ ಭಾರತೀಯ ಸಾಂಪ್ರದಾಯಿಕ ಮನಸ್ಸುಗಳು ಬದುಕಿನಲ್ಲಿ ಒಮ್ಮೆಯಾದರೂ ಕೈಗೊಳ್ಳಬೇಕಾದ 'ಮುಕ್ತಿ, ಮೋಕ್ಷ' ಕುರಿತಾದ ನಂಬಿಕೆಯ ಯಾತ್ರೆಯನ್ನು ನಾನೂ ಕೈಗೊಂಡು, ದೇವರು ನಡೆದಾಡುವ ದೇವ ಭೂಮಿಯಲ್ಲಿ ನಡೆದೆನಲ್ಲಾ ಎಂಬ ಧನ್ಯತೆ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

★ ಯಶಸ್ಸಿನಿಂದ ಬಾಹ್ಯ ಸಂಪತ್ತನ್ನು ಗಳಿಸಬಹುದು. ಆದರೆ ಪ್ರೀತಿ ತಂದುಕೊಡುವ ಆಂತರಿಕ ಸಂಪತ್ತಿಗೆ ಅದು ಸಮನಲ್ಲ.
-ಸ್ಯಾಮುವೆಲ್ ಗೋಲ್ಡ್‌ವಿನ್

★ ನಾಚಿಕೆ ಇಲ್ಲದಿರುವುದು ಮನುಷ್ಯನ ರೋಗಗಳಲ್ಲೇ ಅತ್ಯಂತ ದೊಡ್ಡದು.
-ಯೂರಿಪಿಡಸ್

★ ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ,
ತೊಡಿಸದಿರು ಚಂದ್ರಕಿರೀಟವನು
ಕೊರಳಿಗೆ ಭಾರ ನನಗೆ ನಿನ್ನ ನಕ್ಷತ್ರ ಮಾಲಿಕೆ.
-ಕೆ.ಎಸ್.ನರಸಿಂಹಸ್ವಾಮಿ

★ ಯಾರ ಅನ್ನವನ್ನೂ ಕಿತ್ತುಕೊಳ್ಳಬೇಡಿ. ಅದಕ್ಕಿಂತ ದೊಡ್ಡ ಪಾಪ ಇನ್ನೊಂದಿಲ್ಲ.
-ಮಹಾವೀರ

★ ಉತ್ತರದ ಕಾಶಿಯಲಿ ಕತ್ತೆ ಮಿಂದ್ಯೆತರಲು, ದಕ್ಷಿಣದ ದೇಶಕದು ಕುದುರೆಯಹುದೆ?
-ಕುವೆಂಪು

★ ಅನುಮಾನಾಸ್ಪದ ಗೆಳೆಯನಿಗಿಂತ, ಖಚಿತವಾಗಿ ಗೊತ್ತಿರುವ ಶತ್ರುವೇ ವಾಸಿ.
-ಈಸೋಪ

★ ಪರಿಸ್ಥಿತಿ ಮನುಷ್ಯನನ್ನು ರೂಪಿಸುವುದಿಲ್ಲ; ಆತನ ವ್ಯಕ್ತಿತ್ವವನ್ನು ಬಯಲುಗೊಳಿಸುತ್ತದೆ.
-ಜೇಮ್ಸ್ ಆಲನ್

★ ಸೋಲುಗಳನ್ನು ಎದುರಿಸಿ; ಸೋಲಬೇಡಿ.
-ಮಾಯಾ ಏಂಜೆಲೊ

★ ಕಾನೂನು ಸಕಾರಣವಾಗಿರುತ್ತದೆ, ಎಲ್ಲ ಮೋಹಗಳಿಂದಲೂ ಹೊರತಾಗಿರುತ್ತದೆ.
-ಅರಿಸ್ಟಾಟಲ್

★ ಪ್ರಪಂಚ ಚಲಿಸುವಂತೆ ಮಾಡುವುದು ಆಮೇಲೆ; ಮೊದಲು ನೀವು ಚಲಿಸಿ.
-ಸಾಕ್ರೆಟಿಸ್